ಪ್ರಜಾವಾಣಿ

ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

# ಉತ್ತರ ಕರ್ನಾಟಕ ಅಭಿವೃದ್ಧಿ ಸಾಧ್ಯ



ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ (ಎನ್‌ಜಿಟಿ) ಆದೇಶ ಸಂತಸ ತಂದಿದೆ. ಉತ್ತರ ಕನ್ನಡ ಜಿಲ್ಲೆಯ ಜೊತೆಗೆ ಇಡೀ ಉತ್ತರ ಕರ್ನಾಟಕ ಅಭಿವೃದ್ಧಿಯ ಬಾಗಿಲು ತೆರೆಯಲು ಈ ಯೋಜನೆ ಸಹಕಾರಿ ಆಗಲಿದೆ.

**ರಮಾನಂದ ನಾಯಕ,**

ಹುಬ್ಬಳ್ಳಿ- ಅಂಕೋಲಾ ರೈಲ್ವೆ ಹೋರಾಟ ಕ್ರಿಯಾ ಸಮಿತಿ ಅಧ್ಯಕ್ಷ

# ಪರಿಸರಕ್ಕೆ ಹಾನಿಯಾಗದಂತೆ ಜಾರಿಯಾಗಲಿ



ಹಸಿರು ಪೀಠದ ನಿರ್ಣಯವನ್ನು ಅಭಿವೃದ್ಧಿ ದೃಷ್ಟಿಯಿಂದ ನಾವು ಸ್ವಾಗತಿಸುತ್ತೇವೆ. ಆದರೆ ಪರಿಸರಕ್ಕೆ ಹೆಚ್ಚು ಹಾನಿ ಯಾಗದ ರೀತಿಯಲ್ಲಿ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಯೋಜನೆ ಅನುಷ್ಠಾನಗೊಳ್ಳಲಿ.

**ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ** ಸ್ವರ್ಣವಲ್ಲಿ ಮಠಾಧೀಶ



# ‘ಸಮಯ, ಹಣ ಉಳಿತಾಯ’

ಮಾರ್ಗ ಅನುಷ್ಠಾನಗೊಂಡರೆ ಮುಂಬೈ ಅಥವಾ ಮಂಗಳೂರು ಬಂದರು ಬದಲಿಗೆ ಕಾರವಾರ ಬಂದರು ಮೂಲಕವೇ ಸರಕು ಸಾಗಿಸಬಹುದು. ಇದರಿಂದಾಗಿ ಸಮಯ ಹಾಗೂ ಖರ್ಚು ಎರಡೂ ಉಳಿಯುತ್ತದೆ. ಯೋಜನೆ ಅನುಷ್ಠಾನದಿಂದ ಹಲವು ವರ್ಷಗಳ ಕನಸು ನನಸಾಗಲಿದೆ.

**ರಮೇಶ ಎ. ಪಾಟೀಲ,** ಅಧ್ಯಕ್ಷ, ಹುಬ್ಬಳ್ಳಿಯ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ

# ಸರಕು ಸಾಗಣೆಗೆ ಅನುಕೂಲ

ಈ ರೈಲು ಮಾರ್ಗ ಯೋಜನೆ ಅನುಷ್ಠಾನದಿಂದ ಕರಾವಳಿ ಭಾಗಕ್ಕೆ ಉತ್ತರ ಕರ್ನಾಟಕದ ಸಂಪರ್ಕ ಸಿಗುತ್ತದೆ. ಸರಕು ಸಾಗಣೆಗೆ ಇದು ತುಂಬಾ ಉಪಯುಕ್ತ. ಅಲ್ಲದೇ ಜಿಲ್ಲೆಯ ತದಡಿ ಬಂದರು ಅಭಿವೃದ್ಧಿಗೆ ಕಾರ್ಯಯೋಜನೆ ಸಿದ್ದಗೊಂಡಿದ್ದು, ಇದಕ್ಕೆ ಈ ರೈಲ್ವೆ ಯೋಜನೆ ಪೂರಕವಾಗಲಿದೆ. ಅಲ್ಲದೇ ಪ್ರವಾಸೋದ್ಯಮ ದೃಷ್ಟಿಯಿಂದಲೂ ಈ ಯೋಜನೆ ಮಹತ್ವದ್ದಾಗಿದೆ.

**ರಾಜು ಗಾಂವಕರ್,** ಪಶ್ಚಿಮ ಕರಾವಳಿ ರೈಲ್ವೆ ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ